# ದಲಿತ ವಚನಕಾರರ್ತಿಯರ ಸಾಹಿತ್ಯ ಕೊಡುಗೆ

*ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪ್ರವೇಶ**

ಹೆಣ್ಣೆಂದರೆ ದಾನೆ, ಅಬಲೆ, ಭೋಗದ ವಸ್ತು ಮಾತ್ರವಲ್ಲದೇ ಅವಳು ಮಾಯೆ, ಚಂಚಲೆ, ಪಾಪಿ, ಮೋಕ್ಷ ಸಾಧನೆಗೆ ಅವಳೊಂದು ಆತಂಕವೆಂದು ಮೂಲೆಗೊತ್ತಿ ಪುರುಷ ಸಮಾಜ ಸ್ತ್ರೀಯರನ್ನು ಅತ್ಯಂತ ನಿಕೃಷ್ಟವಾಗಿ ಕಂಡಿತ್ತು. ಅವಳ ಬದುಕನ್ನು ಕರಾಳರೂಪಕ್ಕೆ ತಳ್ಳಿದ್ದವು. ಮಮತೆಯ ಎದೆ ಹಾಲು ನೀಡಿ ಜೀವಕೊಟ್ಟು ವ್ಯಕ್ತಿಗಳ ನಿರ್ಮಾಣ ಮಾಡುವ ಶಕ್ತಿಯುಳ್ಳ ಸಮಾನತೆಯನ್ನು ನೀಡದೆ ಅವರ ಅಸ್ತಿತ್ವವನ್ನು ಅಲುಗಾಡಿಸಿ ಸ್ವಂತ ವ್ಯಕ್ತಿತ್ವವನ್ನೇ ಇಲ್ಲವಾಗಿಸಿದ ಸಮಜದ ಕ್ರೌರ್ಯತೆಗೆ, ಗೊಡ್ಡು ವಿಚಾರಕ್ಕೆ ಅವಿವೇಕತೆದ ಮೌಢ್ಯದಿಲ್ಲಿ ಇರಿಸಿದವು ಈ ಹಿನ್ನೆಲೆಯನ್ನು ಇಟ್ಟುಕೊಂಡು ಧರ್ಮಗಳು ಸ್ತ್ರೀಯರನ್ನು ದಲಿತ ವರ್ಗಕ್ಕೆ ಸೇರಿಸಿ ಅಧ್ಯಾತ್ಮ ಸಾಧನೆಯ ಅಮೂಲ್ಯ ಹಕ್ಕಿನಿಂದ ಅವಳನ್ನು ಸಂಪೂರ್ಣವಾಗಿ ದೂರವಿರಿಸಿ. ಇದು ಹೆಣ್ಣಿಗೆ ವಿಧಿಯೆಂದು ನಂಬಿಸಿದವು. ಈ ತರಹದ ಶತಶತಮಾನದ ಹೆಣ್ಣಿನ ಕಣ್ಣೀರಿನ ಕತೆಗೆ ಅಂತ್ಯಗಾಲ ಬಂದಿದ್ದು 12ನೇ ಶತಮಾನದಲ್ಲಿ. ಹೆಣ್ಣಿನ ಶೋಷಣೆ ಚಿಂತನೆಗಳು ಭಕ್ತಿ ಭಂಡಾರಿ ಬಸವಣ್ಣರ ಧಾರ್ಮಿಕ ಸಾಮಾಜಿಕ ಹಾಗೂ ಸಾಹಿತಿಕ ಕ್ಷೇತ್ರಗಳಲ್ಲಿ ಪ್ರವಹಿಸಿ ಅಂಧಕಾರಮಯವಾದ ಜೀವನದಲ್ಲಿ ಉದ್ಧಾರದ ಕೈದೀವಿಗಳಾಗಿ ಪರಿಣಮಿಸಿತು. ರಾಮಾಯಣ, ಮಹಾಭಾರತ ಪುರಾಣಗಳ ಕಾಲದಿಂದಲೂ ಸ್ತ್ರೀ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿರುವುದನ್ನು ನೋಡಬಹುದು. ಸ್ತ್ರೀಯರು ಸಮಾಜದ ಬಹುಮುಖ್ಯವಾದ ಕರ್ಯಕ್ರಮಗಳಲ್ಲಿ ಅವಕಾಶವಿದ್ದರೂ ಸ್ತ್ರೀಯರನ್ನು ಕಡೆಗಣಿಸಿರುವುದು ಶೋಚನಿಯವಾಗಿದೆ. ಬದುಕಿನಲ್ಲಿ ಸ್ತ್ರೀಯರು ಒಂದು ಕಣ್ಣಿನಂತಿದ್ದರೂ ಅವರನ್ನು ಅನೇಕ ಸಂದರ್ಭಗಳಲ್ಲಿ ಶೋಷಣೆ ಮಾಡಿದ್ದಾರೆ. ಸ್ತ್ರೀ ಎಂದರೆ ದಲಿತರಿಗಿಂತಲೂ ಕೀಳಾಗಿ ಕಂಡಿರುವುದನ್ನು ಕಾಣಬಹುದಾಗಿದೆ. ಮನು ಹೇಳುವಂತೆ 'ಎಲ್ಲಿ ಸ್ತ್ರೀಯರಿಗೆ ಗೌರವಕೊಡುತ್ತಾರೆ ಅಲ್ಲಿ ದಏವತೆಗಳು ನೆಲಸುತ್ತಾರೆ. ಸ್ಮೃತಿಗಳ ಕಾಲದಲ್ಲಿ ಮನು ಮುಂದುವರೆದು 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಸಾರಿರುವಲ್ಲಿ ಸ್ತ್ರೀಯ ಸ್ಥಾನಮಾನ ವಿದಿತವಾಗುತ್ತದೆ. ಮಹಿಳೆ ಇರುವುದೆ ಗಂಡಿಗಾಗಿ ಅವಲು ಕೇವಲ ಒಂದು ಭೋಗದ ವಸ್ತು ಎಂದು ನಡೆಸಿಕೊಂಡಿರುವುದನ್ನು ನೋಡಬಹುದು. ಶರಣರು ಬಸವಣ್ಣನವರು ನೇತೃತ್ವದಲ್ಲಿ ಸ್ತ್ರೀ ವಿಮೋಚನೆಗೆ ಮುಂದಾದವರು ನಿಶ್ಯಬ್ದ ಕ್ರಾಂತಿಯನ್ನೇ ಮಾಡಿದರು. ಹೀಗಾಗಿ ಶರಣರ ಕಾಲದಲ್ಲಿ ಸ್ತ್ರೀಗೆ ಸಂಪೂರ್ಣ ಧಾರ್ಮಿಕ ಸ್ವತಂತ್ರ್ಯ ಮನೋಭಾವ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ವಿಚಾರ ದೊರೆತವು. ವಚನಕಾರ್ತಿಯರು ತಮ್ಮ ದೈನಂದಿನ ಅನುಭವ ಅನಿಸಿಕೆಗಳನ್ನು ಅಭಿವ್ಯಕ್ತಿಗೊಳಿಸಲು ವಚನವನ್ನು ಸಮರ್ಥ ಮಾಧ್ಯಮವನ್ನಾಗಿ ಬಳಸಿಕೊಂಡರು. ಆರಂಭದಲ್ಲಿ ವಚನ ಚಳುವಳಿಯ ಕಾಳಜಿಯಂದರೆ ಸಮಾಜ ವ್ಯವಸ್ಥೆಯನ್ನು ಛಿದ್ರಗೊಳಸುವ ವರ್ಣಾಶ್ರಮ ಧರ್ಮವನ್ನು ವಿರೋಧಿಸುತ್ತಲೇ ಕೆಳಜಾತಿಯ ಸಂಸ್ಕೃತಿಗೆ ಜೀವಕೊಟ್ಟದು ಅಂತೆಯೇ ವಿವಿಧ ಸಾಮಾಜಿಕ ಸ್ತರದಿಂದ ಬಂದ ದಲಿತ ವಚನಕಾರರು ಕೂಡ ಎಲ್ಲರಂತೆಯೇ ಸಾಮಾಜಿಕತೆಯಲ್ಲಿ ಬಾಳುವೆ ನಡೆಸಲು ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಸ್ತ್ರೀಯರು ಲಿಂಗದೀಕ್ಷೆಯನ್ನು ಪಡೆದು ಷಟಸ್ಥಲ ಮಾರ್ಗದಲ್ಲಿ ಮುನ್ನಡೆದು ಮೋಕ್ಷ ಪಡೆಯಬಹುದೆಂದು ಹೇಳಿದ ಬಸವಣ್ಣ ಅಲ್ಲಮಪ್ರಬುಗಳು ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಭಾಗವಹಿಸುವ ಸಮಾನ ಅವಕಾಶವನ್ನು ನೀಡಿದರು.

ಹೆಣ್ಣು ಮಾಯೆ ಎಂಬ ಮಾತನ್ನು ಖಂಡಸಿ ಹೆಣ್ಣು ಮಾಯೆಯಲ್ಲಿ 'ಮನದ ಮುಂದಣ ಆಸೆಯೇ ಮಾಯೆ, ಎಂಬ ಸತ್ಯವನ್ನು ಸಾರಿದರು ಗಂಡಿಗೆ ಹೆಣ್ಣು ಮಾಯಯಾದರೆ, ಗಂಡು ಕೂಡ ಹೆಣ್ಣಿನ ಪಾಲಿಗೆ ಮಾಯೆಯೆ' ಯೋಗಿಗೆ ಯೋಗಿಣಿಯಾಗಿ ಕಾಡಿತ್ತು ಮಾಯ' ಎಂಬ ಅಕ್ಕನ ಈ ವಚನ ಉಕ್ತಿ ಹೆಣ್ಣು ಮಾಯೆಯ್ಲು ಎಂಬುದನ್ನು ಸ್ಪಷ್ಟವಗಿ ಸಾರುತ್ತದೆ. ಈ ವೈಚಾರಿಕ ಕ್ರಾಂತಿಯ ಫಲವಾಗಿ ಸ್ತ್ರೀಯರಲ್ಲು ಜಾಗೃತಿಯುಂಟಾಯಿತು. ಸತ್ತಣಬದುಕಿನ ಆಗು ಹೋಗುಗಳ ಬಗ್ಗೆ ವಿಚಾರ ಮಾಡುವ ಸ್ವತಂತ್ರ್ಯವಿಲ್ಲದೆ ಪುರುಷನ ದಬ್ಬಾಳಿಕೆಗೆ ಒಳಗಾಗಿ ನಾಲ್ಕು ಗೋಡಗಳ ನಡುವೆ ತನ್ನ ಪ್ರಪಂಚವೆಂದು ಭಾವಿಸಿ ದುಡಿಮೆಯೊನೋಗಕ್ಕೆ ಕಟ್ಟು ಬಿದ್ದದ್ದ ಸ್ತರೀಗೆ ಉರುಷರಷ್ಟೆ ಸಮಾನ ಸ್ವಾನಣತ್ರ್ಯದ ಅರಿವು ಲಭ್ಯವಾಯಿತು. ಆಕೆ ವಿದ್ಯ ಕಲಿತ್ತದ್ದಲ್ಲದೇ ತನ್ನ ಆಲೋಚೆಗಳನ್ನು ಗಟ್ಟಿಯಾಗಿ ಹೇಳುವ ಮುಕ್ತ ವಾತಾವರಣಗಳಲ್ಲಿ ಉಸಿರಾಡತೋಡಗೀದಳು ಹೀಗಾಗಿ ಅನೇಕ ಶಿವಶರಣೆಯರು ಪುರುಷರಿಗೆ ಸರಿಸಮಾನವಾಗಿ ಧಾರ್ಮಿಕ ಸಾಹಿತ್ಯಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದು ಮಾತ್ರವಲ್ಲದೇ ಜೀವನದ ನಾನಾ ಸಮಸ್ಯೆಗಳನ್ನು ಬಿಡಿಸಲು ಹೆಣಗಿದರು. ಅದರ್ಲಲಿ ಮೇಲ್ವರ್ಗದ ಸ್ತ್ರೀಯರು ತಮ್ಮ ದ್ಯನಂದಿನ ಅನುಭವ ಅನಿಸಿಕೆಗಳನ್ನು ವಚನ ರೂಪದಲ್ಲಿ ಹೇಳುವ ಸಾಹಸ ಮಾಡಿದರು.

ಮಾಹದೇವಿಯಕ್ಕೆ, ನೀಲಲೋಚನೆಯಂಥವರನ್ನು ಗುರುತಿಸುವುದು ಅದೆ ಅಂದಿನ ವಿಶಿಷ್ಟತೆಯನ್ನು ದಲಿತ ಮಹಿಳೆಯರು ಧ್ವನಿ ಎತ್ತಿದ್ದು ಇತಿಹಾಸದ ಘಟ್ಟದಲ್ಲಿ ಹೆಣ್ಣು ಬಾಯಿ ಮಾತಾಡಿದ್ದೆ ಅಪರೂಪ, ಹೀಗೆ ದಲಿತರಿಂದ ಬಂದ ವಚನಕಾರ್ತಿಯರ ವಚನಗಳಲ್ಲಿ ಬಂಡಾಯ ಮನೋಭಾವ ಎದ್ದು ಕಾಣುತ್ತದೆ. ಸುತ್ತಣ ಪರಿಸರದ್ಲಲಿ ಜಾತಿಭೇಧ, ಶೋಷಣೆ ಅಜ್ಞಾನ, ಮೂಢನಂಬಿಕೆ ಮುಂತಾದ ಅರ್ಥಹೀನ ಆಚರಣೆಗಳು ಅವರ್ರನು ರೊಚ್ಚಿಗೆಬ್ಬಿಸಿದವು. ಅವುಗಳನ್ನು ನಿವಾರಿಸುವ ಸಲುವಾಗಿ ಉಗ್ರವಾಗಿ ಟೀಕಿಸುವ ಮನೋಧೈರ್ಯವನು ಪ್ರಕಟಿಸಿದರು. ಸಾಮಾಜಿಕ ಅನ್ಯಾಯಗಳ ಬಗ್ಗೆ ಅವರು ಸಿಡಿದೆದ್ದರು. ಸಮಾಜಕ್ಕೆ ಕೆಡುಕಾಗಿ ತೋರುವ ಏನನ್ನೆ ಆಗಲಿ ಅವರು ಬಲವಾಗಿ ಖಂಡಿಸು ಮನೋಧರ್ಮ ರೂಢಿಸಿಕೊಂಡರು. ಆ ಕಾಲದಲ್ಲಿ ನಡಿನ ಮೂಝಲೆ ಮೂಲೆಗಳಿಂದ ಬಂದಂತಹ ಸತ್ಯಕ್ಕ, ಕಾಳವ್ವ, ಸೂಳೆ ಸುಂಕವ್ವೆಯರಂಥಹ ನೂರಾರು ಶಿವಶರಣೆಯರು ದಲಿತ ತಮ್ಮ ಮನದಾಳದ ನೋವನ್ನು ವಚನಗಳ ರುಪದಲ್ಲಿ ನಿರ್ಭಿಡೆಯಿಂದ ನಿರ್ಭಿತವಾಗಿ ಅಭಿವ್ಯಕ್ತಿಸಿದರು. ಅದರಲ್ಲಿ ಸ್ತ್ರೀಯರ ಉದ್ಧಾರ ಹಾಗೂ ಅಸ್ಪ್ರಶ್ಯರ ಸಮನತೆ ಶರಣರ ಮೂಲ ಉದ್ದೇಶವಾಗಿತ್ತು.

ಮೇಲುವರ್ಗದವರ ಶೋಷಣೆ ವಂಚನೆಗಳಿಂದ ಅವರ ಮನದ ಆಂತರಿಕ ತುಡಿತವನ್ನು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವ, ಹಡಪದ ಅಪ್ಪಣ್ಣನ ಹೆಂಡತಿ ಲಿಂಗಮ್ಮ, ಸೂಳೆ ಸಂಕವ್ವ ಮೊದಲಾದವರು ಮೊದಲದವರ ವಚನಗಳಲ್ಲಿ ಕಂಡುಬರುವ ಹೆಚ್ಚು ಬಂಡಾಯ ಮನೋಧರ್ಮ, ಉಗ್ರವಾದ ಪ್ರತಿಭಟನೆಗಳನ್ನು ಗ್ರಹಿಸಲೇಬೇಕಾಗುತ್ತದೆ. ಅಂದರೆ ವಚನಕಾರ್ತಿಯರಲ್ಲಿ ಕಾಳವ್ವೆ ಈ ಬಗೆಯ ಧೋರಣೆಯನ್ನು ಬಲವಾಗಿ ಟೀಕಿಸಿರುವಳು.

"ಕರಿಕೋಳಿ ಕಿರಮೀನು ತಿಂಬವರಿಹೆಲ್ಲ
ಕುಲಜ ಕುಲಜರೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ
ತಿಂಬ ಮಾದಿಗ ಕೀಳು ಜಾತಿಯಾದರು"

ಕುರಿಕೋಳಿ, ಕಿರಿಮೀನುಗಳನ್ನು ತಿನ್ನವವರನ್ನು ಉತ್ತಮ ಕಲಜರೆಂದೂ ಶಿವನಿಗೆ ಹಾಲನ್ನು ಕರೆದ ಹಸುವ ತಿನ್ನುವವರನ್ನು ಕೀಳು ಜಾತಿಯವರೆಂದು ವರ್ಗಿಕರಿಸುವ ಸಮಾಜದ ದೋರಣೆಯನ್ನು ಅವಳು ಖಂಡಿಸುತ್ತಾಳೆ. ಅವರೆಂತು ಕಿಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೋ, ಬ್ರಾಹ್ಮಣನಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು. ಮಾದಿಗರುಮಡದು ಪುಲ್ಲಿಗೆ ಬ್ರಾಹ್ಮಣರಿಗೆ ಶೋಭಿತವಾಯಿತು ಅದೆಂತಂದಡೇ ಸಿದ್ದಲಿಕೆಯಾಯಿತು. ತುಪ್ಪವನ್ನು ಸಗ್ಗಳೆಯ ನೀರನ್ನು ಶುದ್ದವೆಂದು ಕುಡಿದು ಬುದ್ದಿಗೇಡು ವಿಪ್ರರಿಗೆ ನಾಯಕ ನರಕ ತಪಪದಯ್ಯ ಎನ್ನುವಳು. ಸಾಮಾಜಿಕ ವ್ಯವಸ್ಥೆಯಲ್ಲಿ ಪಟ್ಟಭದ್ರವಾಗಿ ಮಾನವೀಯತೆಯನ್ನು ಮರೆತು ಶೋಷಣೆ ನಡೆಸಿದ ಪುರೋಹಿತ ವರ್ಗದವರ ಬಗ್ಗೆ ಶೋಷಣೆಗೋಳಗಾದವರ ಎದೆಯ ಬೆಂಕಿ ಅವರ ಮಾತುಗಳಲ್ಲಿ ಬೆಂಕಿ ಉಂಡಗಳಾಗಿ ಸಿಡಿದಿವೆ. ಕಾಳವ್ವ ಅಂತವರ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.

ರುರು–ಲಿಂಗ–ಜಂಗಮಗಳು ಒಂದೇ ಎಂದು ತಿಳಿದ ಪುರಾಣಗಳು ಒಬ್ಬೊಬ್ಬ ಶರಣನ ಕೆತ್ತಲಾದ ಅಮೋಘ ವಾಸ್ತುಶಿಲ್ಪದಮತಿದೆ. ಪುರಾಣಗಳಲ್ಲಿ ಭಕ್ತಿಯ ಅಥವಾ ಭಕ್ತನ ಬದುಕು ಒಂದೊಂದು ತ್ವದ ಅನುಸಂಧಾನ. ಇಲ್ಲಿ ಭಕ ಎದುರಿಸು ತಆಕಿಕ ಜೀವನದ ಘಟನೆಗಳು ಪ್ರಸಮಗಗಳು ಓದುಗರನ್ನು ಚಿಂತನಶೀಲರನ್ನಾಗಿ ಮಾಡಿವೆ. ಸಮಸ್ತ ಶರಣರ ಸುಮದಾಯದಲ್ಲಿ ನಡುವೆ ಹೊಳೆಯುವ ನಕ್ಷಯ್ರುಗಳೆಂದರೆ ಈ ವಚನಕಾರ್ತಿಯರು. ಹೇಗೆಂದರೆ ಪ್ರೌಢರಾಯನ ಕಾವ್ಯ ಗುರುರಾಜ ಚಾರಿತ್ರ್ಯ, ಬಸವ ಪುರಾಣ, ಪದ್ಮರಾಜ ಶಿವತತ್ವ ಚಿಂತಾಮಣಿ ಮುಂತಾದ ಕಾವ್ಯಗಲಲ್ಲಿ ಬಸವ ಪೂರ್ವದ ಹಾಗೂ ಬಸವ ಸಮಕಾಲಿನ ಶರಣ–ಶರಣೆಯ ಕಥೆಗಳು, ಪವಾಡ ಘಟನೆಗಳೂ ಮೂಡಿ ಬಂದಿವೆ.

ಈ ಪುರಾಣಗಳನ್ನು ಹೇಳುವುದು ಸಾಂಪ್ರದಾಉಯಿಕವಾಗಿದೆ. ಶರಣರು ಪ್ರತಿಪಾದಿಸಿದ ಸ್ತ್ರೀ ನಿಷ್ಠೆ ಧೋರಣೆಯಿಂದಾಗಿ ಮಹಿಳೆ ಬಹುಕಾಲದ ಬಂಧನದೀಮದ ಹೊರಬಂದು ಸ್ತ್ರೀ ಶಕ್ತಿಯನ್ನು ತೋರುವ ತನ್ನಂತರಂಗದಲ್ಲಿ ಸುಪ್ತವಾಗಿದ್ದ ಅನಿಸಿಕೆಗಳನ್ನು ಧೈರ್ಯದಿಂದ ಹೇಳುವ ಸಾಹಸ ಮಾಡಿದಳು. ಅದರ ಪ್ರತಿಫಲವೇ ಅನುಭವ ಮಂಟಪದಲಿ ಸಮಾವೇಶಗೊಂಡ ಶಿವಶರಣೆಯರ ಸಮೂಹ ದೇಶ, ಜಾತಿ, ಕುಲ ಹಾಗೂ ಪಂಥಗಳನ್ನು ಮರೆತು ಕಟ್ಟುಪಾಡುಗಳನ್ನು ಬದಿಗೊತ್ತಿ ಸ್ತ್ರೀ ಧರ್ಮದ ಮೇಲ್ಮೆಯನ್ನು ಸಾರಿತು. ಮೊದಲು ಬಾರಿಗೆ ಧಾರ್ಮಿಕ, ಸಾಮಾಜಿಕ ಹಾಗೂ ಆದ್ಯಾತ್ಮಿಕ ವಿಷಯಗಳ ಬಗೆಗೆ ಚಿಂತನೆ ನಡೆಸಿದರು. ತಮ್ಮ ಅಂತರಂಗದ ಭಾವನೆಗಳಿಗೆ ಶಬ್ದಿಕ ರೂಪ ಕಾವ್ಯಮಯವನ್ನಾಗಿಸಿದರು. ತಮ್ ಭಾವನೆಗಳನ್ನು ಹಿಡಿದಿಡಲು ವಚನಸಾಹಿತ್ಯವ್ನನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡರು. ಅಂತೆಯೇ ಇಲ್ಲಿ ಈ ವಚನಕಾರ್ತಿಯರು ಬದುಕಿದ ಕಾಲ, ಸ್ಥಳ ಹಾಗೂ ಅವರಸಾಮಾಜಿಕ ಧಾರ್ಮಿಕ ಹಾಗೂ ಸಾಹಿತೀಕವಾಗಿ ಸಾಧಿಸಿದ ಸಾಧನೆಗಳನ್ನು ಕವಿಚರಿತ್ರೆಕಾರರು ತಮ್ಮ ಕಾವ್ಯಗಳಲ್ಲಿ ಹಿಡಿದಿಟ್ಟಿರುವುದನ್ನು ಗುರುತಿಸಿರುವುದನ್ನು ಗಮನಾರ್ಹ.

ಅಂಥವರಲ್ಲಿ ಶಾಸನೋಕ್ತ ಶರಣೆಯಾದ ವರದಾನಿ ಗುಡ್ಡವ್ವೆ ಮೊದಲಿಗಳು. ಈಕೆಯ ಬಸವಪೂರ್ವದ ಶರನೆ ಎಂಬುದು ಕೆಲವು ಶಾನಗಳಿಂದ ವ್ಯಕ್ತವಾಗುತ್ತದೆ. ಅಸ್ಪೃಶ್ಯ ಜನಾಂಗದಿಂದ ಈ ಶರಣೆಯು ಶಿವ ಸಂಸ್ಕೃತಿ ಪರಂಪರೆಯ ಉದ್ದಕ್ಕೂ ಒಬ್ಬ ವೀರಮಹಿಳೆ ಮತ್ತು ಪವಾಡ ಸ್ತ್ರೀ ಎನಿಸಿಕೊಂಡಿದ್ದಾಳೆ. ಗುಡ್ಡವ್ವೆ ವಚನಕಾರಳು ಎಂಬುದಕ್ಕೆ ಪವಾಡ ಆಧಾರಗಳೇನೂ ಇಲ್ಲ. ಆದರೆ ವರದಾನಿಗುಡವ್ವೆ ಮೂಡಿಸಿದ ಕಥಾನಕ ಪ್ರಸಂಗಳಲ್ಲಿ ವರದಾನಿ ಗುಡ್ಡವ್ವೆಯ ಸ್ಮರಣೆಗೈದಿದ್ದಾರೆ.

ಕೌಟುಂಬಿಕ ನೆಲಯಲ್ಲಿ ಮಾತ್ರ ತಮ್ಮ ಸಾಧನೆಯನ್ನು ಸಲ್ಲಿಸದೆ ಸಾಹಿತ್ಯಕ ಕ್ಷೇತ್ರದಲ್ಲಿಯು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಸಾಹಿತ್ಯಕ ಕ್ಷೇತ್ರದಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಶರಣ ಪ್ರಭಾವಲಯದಲ್ಲಿ ದೊರೆತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಸದುಪಯೋಗ ಪಡಿಸಿಕೊಂಡು ರಚಿಸಿದ ಇವರ ವಚನಗಳು ಅನೇಕ ದೃಷ್ಠಿಗಳಿಂದ ಗಮನಾರ್ಹವಾಗಿದೆ. ಅಕ್ಕಮ್ಮ ಅಮುಗೆರಾಯಮ್ಮ, ಉರಿಲಿಂಗಪೆದ್ದಿಗೆ, ಪುಣ್ಯ ಸ್ತ್ರೀ ಕಾಳವ್ವೆ, ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀಯ ವಚನಗಳಲ್ಲಿ ಸಮಾಜ ವಿಮರ್ಶೆ ಹೆಚ್ಚಾಗಿ ಕಂಡು ಬರುತ್ತದೆ. ಕೇವಲ ಈ ವಚನಕಾರ್ತಿಯರು ಮಾತ್ರವೆ ಅಲ್ಲ ಎಲ್ಲ ಶರಣೆಯರ ವಚನಗಳಲ್ಲಿಯೂ ಸಾಮಾಜಿಕ ತುಡಿತವನ್ನು ಗಮನಿಸಬಹುದಾಗಿದೆ.

ಶರಣ ಧಮ್ದ ತಳಹದಿ ಸರ್ವಸಮನತೆ ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಭಕ್ತರಾದವರೆನ್ನೆಲ್ಲರ ನೊಂದೆ ಎಂಬೆ! ಎಂಬುದು ಶರಣರ ತಾತ್ವಿಕ ನಿಲವು ಮಾನವರು ಎಲ್ಲರೂ ಸಮಾನರು. ಮೇಲು–ಕೀಳು, ಹೆಣ್ಣು–ಗಂಡು, ಹಿರಿದು ಎಂಬುದೆಲ್ಲಾ ಕೃತಕ ಸ್ವಾರ್ಥ ಪ್ರೇರಕವಾದದ್ದು, ಇದು ಸಮಾಜದ ಪ್ರಗತಿಗೆ ಘಾತುಕವಾದುದು. ಹಿರಿದು–ಕಿರಿದು, ಮೇಲು ಕೀಳುಗಳನ್ನು ಕಲ್ಪಿಸಿದ ಮಾನವನ ಹೇಯ ದುರ್ಬುದ್ದಿ ಅತ್ಯಂತ ಕೀಳುತನದಿಂದ ಕೂಡಿದ್ದು ಎಂದು ಶರಣರು ಅದನ್ನು ಬಲುವಾಗಿ ಖಂಡಿದಿರು. ದೇವರು ಒಬ್ಬನೇ, ಭಕ್ತಿಯೊಂದೇ ಅದಕ್ಕೆ ದಾರಿ, ಸೇವೆಯೊಂದೇ ಅದರ ಮಂತ್ರ ಎಂಬುದನ್ನು ಭೋದಿಸಿದರು. ಅದು ಅವರ ಸಾಮಾಜಿಕ ಜೀವನ ಮರ್ಲ್ಯಕ್ಕೆ ಹಿನ್ನೆಲೆಯಗಿ ನಿಂತುಕೊಂಡಿತು. ಪ್ರಭು–ಪೂಜಾರಿಗಳ ಹಿಡಿತದಿಂದ ದೇವರನ್ನು ಪಾರುಮಾಡಿ ಜನತೆಯ ಮೌಢ್ಯವನ್ನು ಹೊಡೆದೊಡಿಸಿದರು. ಏಕದೇವೋಪಾಸನೆಯನ್ನು ಪ್ರತಿಷ್ಠಾಪನೆ ಮಾಡಿದರು. ಅವರು ಕಂಡ ಸಮಾಜಿಕ ದೃಷ್ಠಿಗೆ ಏಕದೇವೋಪಾಸನೆ ಪ್ರಯೋಜನಕಾರಿಯಾಯಿತು. ಅದು ಸತ್ ಚಿತ್ ಹಾಗೂ ಆನಂದ ಸ್ವರೂಪನಾದ ಸ್ವಯಂ ಭಕ್ತಿಯ ಉಪಸನೆಯತ್ತ ಜನಮನವನ್ನು ತಿರುಗಿಸಿದರು. ಈ ಮೂಲಕ ಸ್ಥಗಿತಗೊಂಡ ಸಮಾಜ ವ್ಯವಸ್ಥೆಯನ್ನು ಚಲನಶೀಲಗಳಿಸುವ ನಿಷ್ಕ್ರಿಯಗೊಂಡ ಬದುಕಿನಲ್ಲಿ ಸಮಾಜ ವ್ಯವಸ್ಥೆಯನ್ನು ಆಮೂಲಾಗ್ರ ಬದಲಾವಣೆಗೆ ಕರಣವಾಗುವ ವಿಚಾರಗಳಿಗೆ ಹೆಚ್ಚಿನ ಪ್ರಾಮೂಖ್ಯತೆಯನ್ನು ನೀಡಿರುವುದು ಗುರುತಿಸಬಹುದಾಗಿದೆ.

ಒಂದು ಮನೆತನದ ಇಡಿ ಭಾರವನ್ನೇ ಹೋರುವ ಆಕೆಯನ್ನು ಹೇಗೆ ಕೀಳನ್ನಲಾದೀತೆ? ಇದೆಲ್ಲದರ ಸಂಪರ್ಣ ಅನುಭವ ಅರಿವು ಇದ್ದ ಶಿವಶರಣೆಯರು ಸ್ತ್ರೀಗೆ ಹೊಸ ಅನುಭವದ ಅರಿವುಂಟಾಗುವಂತೆ ಮಾಡಿದರು. ಆಕೆಯ ವೈಚಾರಿಕ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿಕೊಟ್ಟರು. ಈ ವಚನ ಸಾಹಿತ್ಯ ಸಂದರ್ಭದಲ್ಲಿ ಧಾರ್ಮಿಕವಾಗಿ, ಸಾಹಿತ್ಯಕವಾಗಿ, ಸಮಾಜಿಕವಾಗಿ ಸ್ತ್ರೀ ಸಂಪೂರ್ಣ ಸ್ವತಂತ್ರ್ಯವನ್ನು ಹೊಂದಿದ್ದಳು ಹೆಣ್ಣು ಕೂಡ ಪುರಷನಂತೆ ಮಾತನಾಡಬಲ್ಲಳು, ಯೋಚಿಸಬಲ್ಲಳು ಎಂಬುದನ್ನು ಮೊಟ್ಟೊಮದಲ ಬಾರಿಗೆ ವಚನಕಾರ್ತಿಯರು ಜಗತ್ತಿಗೆ ತೋರಿಸಿಕೊಟ್ಟರು. ಅಂದಿನ ವೈಶಿಷ್ಟ್ಯತೆಯೆಂದರೆ ಕೆಳವರ್ಗದ ಮಹಿಳೆಯರು ಕೂಡ ದನಿತೆಗೆದು ಅಪರೂಪ ಅಂಥದರಲಿ ಹನ್ನೆರಡನೆಯ ಶತಮಾನದ ಶಿವಶರಣರು ತೋರಿಸಿದಿ ವಿಶಾಲ ಮನೋಭವ ನಡೆಸಿದ ಕ್ರಾಂತಿಯ ಫಲವಾಗಿ ಮೂಲೆಗುಂಪಾಗಿದ್ದ ದಲಿತ ಮಹಿಳೆಯರು ವಚನ ಚಳುವಳಿಯಲ್ಲಿ ಭಾಗಿಗಾಳಾಗಿದ್ದರು.

ವಚನಕಾರ್ತಿಯಲ್ಲಿ ಅನೇಕರಿಗೆ ಶೈವಾಚಾರವನ್ನು ಎತ್ತಿ ಹಿಡಿಯುವಂಥ ಧಾರ್ಮಿಕ ಪರಂಪರೆಯೇ ಜೀವನ ಗುರಿಯಾದ್ದು, ಪರಂಪರಾನುಗತವಾಗಿ ರೂಢಿಯಲ್ಲಿದ್ದ ಪತಿಭಕ್ತಿ, ಕಾಯಕ, ದಾಸೋಹ, ಆದ್ಯೋತ್ಮೋನ್ನತಿ ಮುಂತಾದ ಮೌಲ್ಯಗಳಿಗೆ ತಲೆಬಾಗುವುದು ಹಿತವಾಗಿ ಕಂಡಿದ್ದಾರೆ. ಅವರಲ್ಲಿ ಕೆಲವರು ಸ್ತ್ರೀ ಧರ್ಮಕ್ಕಿಂತಲೂ ದೂರ ಸರಿದು ಹೊಸದೆ ಆದ ಜೀವನ ಧರ್ಮವನ್ನು ಅನಾವರಣಗೋಳಿಸುವ ರೀತಿ ಅದ್ಭುತವೆನಿಸುತ್ತದೆ. ಪತಿಗೆ ಬುದ್ದಿ ಹೇಳುವಷ್ಟು ಪ್ರಬುದ್ದಳಾದ ಲಕ್ಕಮ್ಮ, ಅದ್ಭುತ ಶಿಕ್ಷಣ ಮನೋಭಾವವನ ನು ತೊರುವ ಲಿಂಗ್ಮಮ ಹೆಣ್ಣು–ಗಂಡಿನ ಭೇದವನ್ನು ಸಾರುಸಗಟಾಗಿ ಖಂಡಿಸುವ ಗೊಗ್ಗವ್ವೆ, ಇವರೆಲ್ಲಾ ಅಂದಿನ ಸಮಾಜ, ಸಂಸಾರವನ್ನು ಕುರಿತಂತೆ ಸ್ಥಾಪಿಸಿದ ಮೌಲ್ಯಗಳಿಗೆ ತ್ಮಮದೆ ಅದ ರೀತಿಯಲ್ಲಿ ವ್ಯಾಖ್ಯಾನ ನೀಡಿದರು. ಒಟ್ಟಿನಲ್ಲಿ ಈ ವಚನಕಾರ್ತಿಯರ ದೃಷ್ಟಿಯ ಹರವು ಎಲ್ಲಾ ಕ್ಷೇತ್ರವನ್ನು ವ್ಯಾಪಿಸಿತು. ಕೇವಲ ಕುಟುಂಬ ಅಷ್ಟೇ ಅಲ್ಲ ಇಡೀ ಸಮಾಜದ, ಧರ್ಮದ ಅನುಭವಗಳು ವಚನಕಾರ್ತಿಯರ ವಚನಗಳಲ್ಲಿ ಅಭಿವ್ಯಕ್ತಗೊಂಡಿವೆ.

ನಮ್ಮ ಸ್ತ್ರೀ ಜನಾಂಗವು ಅಲೋಚನಾ ಶಕ್ತಿ, ವಿಚಾರ ಸಾಮಾರ್ಥ್ಯಗಳನ್ನು ಬೆಳೆಸಿಕೊಳ್ಳುತ್ತ ಬಂದದ್ದು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದು ಅದಕ್ಕೆ ತಕ್ಕಂತೆ ತಮ್ಮದೆ ಅದ ಪರಿಸರವನ್ನು ನಿರ್ಮಿಸಿಕೊಂಡದ್ದು ತುಂಬಾ ಮಹ್ವಪೂರ್ಣವಾದ ಸಂಗತಿಯಾಗಿದೆ. ದಲಿತ ಶರಣೆಯರು ಗಣನೀಯ ಸಂಖ್ಯೆಯಲಿ ತಮ್ಮ ತಮ್ಮ ಪರಿಮಿತಯೋಳಗೆ ಸಮಜವನು ಕುರಿತು ಚಿಂತಿಸಿರುವುದು, ತಮ್ಮ ಅಭಿಪ್ರಾಯಗಳನ್ನು ನಿರ್ಭಿತವಾಗಿ ವ್ಯಕ್ತಪಡಿಸಿರುವುದು

ಸ್ತ್ರೀಯ ಅಭಿವ್ಯಕ್ತಿಯ ಹಾದಿಯಲ್ಲಿ ಕೂತುಹಲಕರ ಹಾಗೂ ಅತ್ಯಂತ ಮಹತ್ವದ ಸಾಧನೆಯನಿಸುತ್ತದೆ. ವನಕಾರ್ತಿಯರು ಬಹುಮಟ್ಟಿಗೆ ಅನುಭಾವ, ಆತ್ಮಶುದ್ಧಿ, ಧರ್ಮ, ನೀತಿ, ಡಾಂಭಿಕ ಭಕ್ತಿ ಮುಂತಾದವುಗಳನ್ನು ಕುರಿತು ಹೇಳುತ್ತಾರೆ. ಇವರು ಒಂದೊಂದು ಬಾವಿ ಸಮಾಜ ಸುಧಾರಕರಂತೆ, ಮನೋವಿಜ್ಞಾನಿಗಳಂತೆ ಕಂಡುಬರುವುದು ಆಶ್ಚರ್ಯವೆನಿಸುತ್ತದೆ. ಸಂಪ್ರದಾಯ ವ್ಯವಸ್ಥೆಗಳ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ.

ಅನಿಭವಿಗಳಾಗಿ ಆತ್ಮದಗುಣವನ್ನು, ಮನದ ಚಪಲತೆಯನ್ನು ನೆನೆಯುತ್ತಾರೆ. ಆದರೆ ಇವೆಲ್ಲವುಗಳ ಹೀಗೆ ಅವರ ಮಾನವತಾ ಮನಸ್ಸು ಸಮಾಜದ ಬಗೆ ಮಿಡಿಯುತ್ತದೆ. ಅವರು ನಡೆದ ದಾರಿ ಆಧ್ಯಾತ್ಮದ ರಾಜಮಾರ್ಗವದರೂ ಲೌಕಿಕವನ್ನು ತಬ್ಬಿಕೊಂಡ ಇವರ ಒಲವು ನಿಲುವುಗಳ ಮಾನವಿಯ ಸಮಬಂಧವನು ಗಟ್ಟಿಗೊಳ್ಳುವಲ್ಲಿ ಮಹತ್ವಪೂರ್ಣವೆನಿಸುತ್ತದೆ. ಒಟ್ಟಾರೆಯಾಗಿ ತಮ್ಮ ವಿಚಾರಶಕ್ತಿಯನ್ನು ಚಿಂತನೆ ಶೀಲತೆಯನ್ನು ಮೆಚ್ಚಲೇಬೇಕು. ಇವರಲ್ಲಿ ಲಿಂಗಮ್ಮ, ಸತ್ಯಕ್ಕ, ಕಾಳವ್ವೆ, ರೇವಮ್ಮನವರ ವಚನಗಳನ್ನು ಪ್ರಮುಖವಾಗಿ ಗುರುತಿಸಲಾಗಿದೆ. ಅವರ ವಚನಗಳಲ್ಲಿ ವ್ರತ ಸಂಬಂದ ವಿಚಾರಗಳು, ಗುರುವಿರಕ್ತ ಜಂಗಮ ಇವರನ್ನು ಕುರಿತು ವಿಡಂಬನೆಗಳು ಶಿಲ ಚಾರಿತ್ರ್ಯ ನುಡಿ–ನಡೆಗಳ ಮುಂತಾದ ವಿಚಾರಗಳು ಇವರ ವಚನಗಳಲ್ಲಿ ಬಿಂಬತವಾಗಿದೆ. ರೇವಮ್ಮ ಹಾಗೂ ಕಾಳವ್ವೆಯರ ಮಾತುಗಳಲ್ಲಿ ಕಂಡುಬರುವ ಒರಟುತನ, ಅವರ ನಿರ್ಭಿತ ಮನಸ್ಸನ್ನು ವಿಶಿಷ್ಟ ಸಂಸ್ಕೃತವನ್ನು ತೋರಿಸಿಕೊಡುವುದು ಕೇವಲ ಸ್ತ್ರೀ ಸಮಾಜವನ್ನು ಕುರಿತು ಅದರಲ್ಲಿ ಅಡಗಿರುವ ಪೊಳ್ಳುತನವನ್ನು ನಿರ್ಭಿಡೆಯಾಗಿ ವಿಡಂಬಿಸಿರುವುದು ವಚನಕಾರ್ತಿಯರ ಎದೆಗಾರಿಕೆಗೆ ಸಾಮಾಜಿಕ ಕಾಳಜಿಗೆ ನಿದರ್ಶನವಾಗಿದೆ.

ಈ ರೀತಿಯಾಗಿ ಕೇತಲದೇವಿ, ಗುಡ್ಡವ್ವ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಕಾಳವ್ವೆ, ಕಾಲಕಣ್ಣಿಯ ಕಾಮವ್ವ, ರೇವಮ್ಮ, ಮುಂತಾದ ವಚನಕಾರ್ತಿಯರು8 ಇಡೀ ಸಮಾಜವನ್ನು ಬದಲಯಿಸುವ ಆಂದೋಲನದಲ್ಲಿ ಮುಂಚೂಣಿಯಲ್ಲಿದ್ದರು. ನಾನಾ ವರ್ಗಗಳಿಂದ ಬಂದವರಾಗಿದ್ದರಿಂದ ಶತಮಾನಗಳಿಂದ ಬಂದ ನೋವನ್ನು ತಮ್ಮ ಮಾತಿನ ಮೂಲಕ ಹರಿಯಬಿಟ್ಟಿದ್ದಾರೆ. ಆತಿ, ಧರ್ಮ, ವರ್ಗ, ವರ್ಣ ಮುಂತಾದವುಗಳ ಬಗೆಗೆ ಸಿಡಿದೆದಿದ್ದಾರೆ. ಧರ್ಮದಿಂದ ದೂರವಿದ್ದು, ಶೂದ್ರಳೆನಿಸಿಕೊಂಡ ಹಡಣ್ಣು ಈ ವಚನ ಯುಗದಲ್ಲಿ ಆಲವಾಗಿ ಆದ್ಯಾತ್ಮ ಚಿಂತನೆ ಮಾಡಿದ್ದಾಳೆ ಮೋಕ್ಷ ಸಾಧಿಸಿದ್ದಾಳೆ. ಇವಳ ಮಹಿಳಾ ಶೋಷಣೆಯ ವಿರುದ್ಧ ದನಿ ಎತ್ತಿದ್ದರೂ ಇವರು ದ್ವೇಷಗಳಾಗಿರಲಿಲ್ಲ, ಪುರುಷರನ್ನು ತಿರಸ್ಕರಿಸಿದಾಗ ಮಾತ್ರ ಸಮಾನತೆ ಬಂದು ಬಿಡುತ್ತದೆ ಎಂದು ಇವರ ಭಾವಿಸಿರಲಿಲ್ಲ. ಸಮಾನತೆಗೆ ಹೆಣ್ಣು–ಗಂಡು ಇಬ್ಬರೆ ಸಹಕರ, ಸಹಬಾಳ್ವೆ ಮುಖ್ಯ ಎಂಬುದನ್ನು ಇವರು ಚೆನ್ನಾಗಿ ಮನಗಂಡಿದ್ದರು. ಅಂತೆಯೇ ಇವರ ವಚನಗಳಲ್ಲಿ ತಮ್ಮ ಪತಿಯ ಬಗ್ಗೆ ಗೌರವ ಆದರಗಳನ್ನು ಹೊಂದಿದ್ದು, ಅವರ ನೆರಳಿನಂತೆ ನಡೆದದ್ದು ಸ್ಪಷ್ಟವಾಗುತ್ತದೆ. ಹಾಗೆಯೇ ಇವರ ವಚನಗಳಲ್ಲಿ ಸ್ತ್ರೀಪರ ಕಾಳಜಿ ಮೌಲ್ಯಗಳ ವಿರುದ್ಧ ಪ್ರತಿಭಟನೆ ಇದೆಯೇ ಹೊರತು ಬೇರೆಯವರನ್ನು ದೊಷಿಸಬೇಕೆಂದು ದುರುದ್ದೇಶ ಖಂಡಿತ ನಮಗೆ ಕಾಣಸಿಗದು. 'ಶರಣರ ಲಿಂಗಪತಿ' ಎಂಬುದರಲ್ಲಿ ನಂಬಿಕೆಯಿಟ್ಟು ಸಾಮರಸ್ಯದ ಬಗೆಯನ್ನು ಅರಿತವರಾಗಿದ್ದರು. ಈ ವಚನಕಾರ್ತಿಯರ ನೋವು ಕಾಳಜಿಗಳು ಕೇವಲ ಅವರ ವೈಯಕ್ತಿಕ ನೆಲೆಯಲ್ಲಿ ಮಾತ್ರವಿರದೇ ವೈಯಕ್ತಿಕತೆಯಿಂದ ಸಾರ್ವತ್ರಿಕತೆಯ ದೃಷ್ಠಿಯಿಂದ ಸಮವ್ಯಾಪಿಯವರೆಗೆ ಇತ್ತು. ಅದಕ್ಕಾಗಿಯೇ ಈ ವಚನಕಾರ್ತಿಯರ ಸಂವೇದನೆಗಳು ಸರ್ವಕಾಲಿಕವಾಗಿವೆ.

ಸಮಾಜಿಕ ಸಂದರ್ಭದ ಇನ್ನೊಂದು ದೊಡ್ಡ ಪಿಡುಗೆಂದರೆ ಜಾತಿ ವ್ಯವಸ್ಥೆ. ಇದನ್ನು ಒಡೆಯಲು ಅನೇಕ ಪ್ರಯತ್ನಗಳು ನಡೆದರೂ ಯಾವುದೂ ಯಶಸ್ವಿಯಾಗಿಲ್ಲದಿರುವುದು ಅದು ಎಷ್ಟು ಆಳವಾಗಿ ಬೇರೂರಿದೆ ಎಂಬುದನ್ನು ಸೂಚಿಸುತ್ತದೆ. ವಚನಕರರು ಈ ವೈಷಮ್ಯವನ್ನು ತೊಡೆದು ಹಾಕಲು ಕಂಕಣಬದ್ದಾರಾಗಿ ನಿಂತರ. ಸಮಾಜದಲ್ಲಿ ಪ್ರೀತಿ ವಿಶ್ವಾಸಗಳ ಬದಲಾಗಿ ಮನುಷ್ಯ ನಡುವೆ ಸ್ವಾರ್ಥ ಹೆಚ್ಚಾಗಿ ಪರಸ್ಪರ ದ್ವೇಷ–ಅಸೂಯೆಗಳೇ ತುಂಬಿ ತುಳುಕಾಡುತ್ತಿರುವ ಸಂದರ್ಭದಲ್ಲಿ ವಚನಕಾರರ ಉದಯವಾಯಿತು. ಶ್ರೇಣಿಕೃತ ವ್ಯವಸ್ಥೆಯಲ್ಲಿ ಶೋಷಣೆ ಅತ್ಯಾಚಾರಗಳು ಹೆಚ್ಚಾಗಿದ್ದ ಸಮಯದಲ್ಲಿ ದುಡಿಯುವ ವರ್ಗದಿಂದ ಬಂದ ವಚನಕಾರರು ಸಂಪ್ರದಾಯದ ಮೌಢ್ಯತೆಯ ಪರದೆಯನ್ನು ಹರಿದು ಹಾಕಿ ಸಮಜವನ್ನು ಕಟ್ಟಲೆತ್ನಿಸಿದರು. ಮನುಷ್ಯ ಮನುಷ್ಯರ ತಲೆ ಎತ್ತಿದ ಅಸಮಾನತೆಯ ಸೌಧವನ್ನು ಕಟ್ಟಿದರು. ತಾವು ಹಾಕಿದ ಗೆರೆಗಳನ್ನು ತಾವೆ ದಾಟುತ್ತ ತಾವು ಹೇಳಿದ ಮತುಗಳನ್ನು ಆಕಾಶದೆತ್ತರಕ್ಕೆ ಬೆಳೆದು ಜೊತೆ ಜೊತೆಯಾಗಿಯೇ ಸಾಗಿದರು. ಇದೇ ಕೊನೆಯೆಂದು ತಿಳಿಯದೇ ತಾವು ಹೇಳಿದ್ದೆ ಅಂತಿಮವೆಂದು ತಿಳಿಯದೆ ಹೊಸ ಹೊಸ ಆಲೋಚನೆಗಳನ್ನು ಬರಮಾಡಿಕೊಂಡು ಹೊಸ ವಇಚಾರಗಳನ್ನು ಬಿತ್ತಿರಿಸಿದ್ದು ಕಾಣುತ್ತೇವೆ. ಈ ಸಮಯದಲ್ಲಿ ಜಾತಿ ವ್ಯವಸ್ಥೆ ಅತ್ಯಂತ ಕಠಿಣವಾಗಿತ್ತು. ಹುಟ್ಟಿ ಆಧಾರದ ಮೇಲೆ ಮನುಷ್ಯನೊಬ್ಬನ ಮೇಲು–ಕೀಳು ಆಗಿರುವುದಕ್ಕೆ ಜಾತಿ ವ್ಯವಸ್ಥೆಯೇ ಪೂರ ಲಾಭವನ್ನು ಪಡೆದವರು ವೈದಿಕರು. ಎಲ್ಲರಿಗಿಂತ ತಾವು ಮಾತ್ರ ಶ್ರೇಷ್ಠರೆಂಬದನ್ನು ಪ್ರತಿಪಾದಿಸುತ್ತ ತಮಗೆ ಬೇಕಾದವರನ್ನು ಸಾಮಾಜಿಕವಾಗಿ ಮೇಲ್ಮಟ್ಟಕ್ಕೇರಿಸುವ ಅಧಿಕಾರವನ್ನು ಈ ವೈದಿಕರು ಹೊಂದಿದರು. ಇಂಥ ಒಂದು ವ್ಯವಸ್ಥೆಯ ದಳ್ಳುರಿಗೆ ಸಿಕ್ಕು ನಲುಗಿ ಹೋದ ಕೇಳವರ್ಗದ ಜನ ಅವರ ವಿರುದ್ಧ ಕಿಡಿಕಾರಿದರು. ಸಾಮಾಜಿಕ ಅಸಮಾನತೆಗೆ ಅಡ್ಡಿಯಾಗುತ್ತಿದ್ದದ್ದು ಬ್ರಾಹ್ಮಣವೇ ಹೊರತು ಆಡಳೀತಾತ್ಮಕ ವ್ಯವಸ್ಥೆ ಅಲ್ಲವೆಂಬುದನ್ನು ಕೆಳವರ್ಗದ ವಚನಕಾರರು ಚೆನ್ನಾಗಿ ಅರಿತಿದ್ದರು. ಶ್ರೇಷ್ಠತ್ವದ ನಿರ್ನಾಮವಾಗದೇ ಕನಿಷ್ಠತೆ ಅಳಿಸಿ ಹೋಗಲರದೆಂಬುದನ್ನು

ಕಂಡುಕೊಂಡ ಇವರು ಬ್ರಾಹ್ಮಣ್ಯದ ಬೇರುಗಳನ್ನು ಕಿತ್ತು ಜಾಲಡತೊಡಗಿದರು. ವಚನ ಚಳುವಳಿಯಲ್ಲಿ ಕೇವಲ ವಚನಕಾರರೆ ಭಾಗವಹಿಸಲಿಲ್ಲ. ಅವರ ಸರಿಸಮಾನವಾಗಿ ಹಲವಾರು ಜನ ದಲಿತ ವಚನಕಾರ್ತಿಯರು ಕೂಡ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಗಂಗಾಂಬಿಕಾ, ಅಕ್ಕನಾಗಮ್ಮರಂತಹ ನಾಲ್ಕಾರು ಜನರನ್ನು ಬಿಟ್ಟರೆ ಉಳಿದೆಲ್ಲಾ ವಚನಕಾರ್ತಿಯರು ದಲಿತರಿಂದಲೇ ಬಂದವರಾಗಿದ್ದಾರೆ.

**ಆಧಾರ ಗ್ರಂಥಗಳು**


1. ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಮ.ನ.ಜವರಯ್ಯ
2. ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೇ ಡಾ. ಗುಂಡಣ್ಣ ಕಲಬುರ್ಗಿ.
3. ಸಂಕೀರ್ಣ ವಚನ ಸಂಪುಟ: ಡಾ. ವೀರಣ್ಣ ರಾಜೂರು.
4. ಶಿವಶರಣೆಯ ವಚನ ಸಂಪುಟ: ಡಾ ವೀರಣ್ಣ ರಾಜೂರ.
5. ಹೈದ್ರಾಬಾದ ಕರ್ನಾಟಕದ ದಲಿತ ಸಾಹಿತ್ಯ: ಎಂ.ಆರ್. ಚಲವಾದಿ.